ತಳಿವಾರು ವಿವರವನ್ನು ಪಟ್ಟಿಯಲ್ಲಿ ನೀಡಿದೆ. ಸದರಿ ಬಿತ್ತನೆ ಬೀಜಗಳನ್ನು ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ. 2003–04ನೇ ಸಾಲಿನಲ್ಲಿ ಆಗ್ರೋ ಕೇಂದ್ರಗಳ ಮುಖಾಂತರ ಬಿತ್ತನೆ ಬೀಜ ವಿತರಣೆಯಾಗಿರುವುದಿಲ್ಲ.

ಆ) ವಿತರಣೆ ಮಾಡಿರುವ ಬಿತ್ತನೆ ಬೀಜಗಳ ಪ್ರಮಾಣ ಮತ್ತು ದರಗಳ ವಿವರವನ್ನು ಪಟ್ಟಿಯಲ್ಲಿ ನೀಡಿದೆ.

2009 (2413) : ಶ್ರೀ ಸುನೀಲ್ ವಲ್ಲಾಪುರೆ (ಶಹಾಬಾದ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿಯ ಬೆಳೆ ವಿಮೆಯ ಪ್ರಮಾಣವೆಷ್ಟು ;

ಆ) ಬೆಳೆ ವಿಮೆ ಪ್ರಾರಂಭಿಸಿದ ವರ್ಷ ಯಾವುದು; ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಯಾವ ಯಾವ ಬೆಳೆಗೆ ವಿಮಾ ಕಂತು ಕಟ್ಟಲು ಅವಕಾಶಗಳಿವೆ;

ಇ) ಪ್ರತಿ ಹಳ್ಳಿಯಿಂದ ಬೆಳೆ ವಿಮೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವಿವರ ಒದಗಿಸುವುದು);

ಈ) ಬೆಳೆವಿಮೆ ಅರ್ಜಿಗಳು ಪುರಸ್ಕೃತಗೊಳ್ಳಲು ಇರುವ ಮಾನದಂಡಗಳೇನು; ಅವುಗಳ ಸಂಖ್ಯೆ ಎಷ್ಟು;

ಉ) ತಿರಸ್ಕೃತ ಬೆಳೆ ವಿಮೆ ಅರ್ಜಿಗಳ ಸಂಖ್ಯೆ ಎಷ್ಟು; (ತಿರಸ್ಕೃತಗೊಂಡ ಕಾರಣಗಳನ್ನು ನೀಡುವುದು);

ಊ) ಗುಲ್ಬರ್ಗಾ ಹಾಗೂ ಚಿತ್ತಾಪೂರ ತಾಲ್ಲೂಕುಗಳ ರೈತರಿಗೆ ಮುಂಗಾರು ಮತ್ತು ಹಿಂಗಾರು ಬೆಳೆಗಳ ವಿಲೇವಾರಿ ಮಾಡಿ ಹಣ ವಿತರಣೆ ಮಾಡಿರುವುದು ಎಷ್ಟು; (ತಾಲ್ಲೂಕುವಾರು ಹಾಗೂ ವರ್ಷವಾರು ವಿವರ ನೀಡುವುದು)?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) –

ಅ) ಗುಲ್ಬರ್ಗಾ ಜಿಲ್ಲೆಯ ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೂ.130.31 ಲಕ್ಷ ಬೆಳೆ ವಿಮಾ ನಷ್ಟ ಪರಿಹಾರವನ್ನು 2003ರ ಮುಂಗಾರು ಹಂಗಾಮಿನಲ್ಲಿ ವಿತರಿಸಲಾಗಿದೆ.

ಆ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಕೇಂದ್ರ ಸರ್ಕಾರವು 1999–2000ನೇ ಸಾಲಿನಿಂದ

ರಾಷ್ಟ್ರದಲ್ಲಿ ಅನುಷ್ಠಾನಗೊಳಿಸಿರುತ್ತದೆ. ರಾಜ್ಯದಲ್ಲಿ ಈ ಯೋಜನೆಯನ್ನು 2000ದ ಮುಂಗಾರು ಹಂಗಾಮಿನಿಂದ ಜಾರಿಗೊಳಿಸಲಾಗಿದೆ. 2004–05ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯಡಿಯಲ್ಲಿ ಅಳವಡಿಸಲಾದ ಬೆಳೆಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) 2003ರ ಮುಂಗಾರು ಹಂಗಾಮಿನಲ್ಲಿ ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 4815 ರೈತರು ಅರ್ಜಿಯನ್ನು ಸಲ್ಲಿಸಿ ಬೆಳೆ ವಿಮಾ ಯೋಜನೆಯಡಿ ಭಾಗವಹಿಸಿರುತ್ತಾರೆ. ಶಹಾಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ ಬಂದಿರುವ ಅರ್ಜಿಗಳ ವಿವರಗಳು ಈ ಕೆಳಕಂಡಂತಿದೆ.

ತಾಲ್ಲೂಕು	ಹೋಬಳಿ	ಅರ್ಜಿಗಳ ಸಂಖ್ಯೆ
ಗುಲ್ಬರ್ಗಾ	ಫರತಾಬಾದ್	2238
	ಗುಲ್ಬರ್ಗಾ	728
ಚಿತ್ತಾಪೂರ	ನಾಲಾವಾರ	979
	ಶಹಾಬಾದ್	870
	ಒಟ್ಟು	4815

ಬೆಳೆ ವಿಮಾ ಯೋಜನೆಯಡಿಯಲ್ಲಿ ಹಳ್ಳಿಯನ್ನು ಘಟಕವನ್ನಾಗಿ ಅಧಿಸೂಚಿಸದ ಪ್ರಯುಕ್ತ ಹಳ್ಳಿವಾರು ವಿವರಗಳು ಲಭ್ಯವಿರುವುದಿಲ್ಲ.

ಈ) ಅರ್ಜಿ ಪುರಸ್ಕೃತಗೊಳ್ಳಬೇಕಾದರೆ ಅರ್ಜಿಯು ಪೂರ್ಣವಾಗಿ ಭರ್ತಿಯಾಗಿರಬೇಕು, ಅರ್ಜಿಯೊಂದಿಗೆ ಜಮೀನು ಹೊಂದಿರುವುದಕ್ಕೆ ದಾಖಲಾತಿಗಳನ್ನು ಹಾಗೂ ಬಿತ್ತನೆ ಮಾಡಿರುವ ಬಗ್ಗೆ ಬಿತ್ತನೆ ದೃಢೀಕರಣ ಪತ್ರವನ್ನು ಕಂದಾಯ ಇಲಾಖೆಯಿಂದ ಪಡೆದು ಲಗತ್ತಿಸಿರಬೇಕು. ಇದಲ್ಲದೆ, ನಿಗದಿತ ದಿನಾಂಕದೊಳಗೆ ವಿಮಾ ಕಂತನ್ನು ಪಾವತಿಸಿ ಅರ್ಜಿಯನ್ನು ಸಲ್ಲಿಸಿರಬೇಕು.

ಉ) 2003ರ ಮುಂಗಾರು ಹಂಗಾಮಿನಲ್ಲಿ ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅರ್ಜಿಯು ತಿರಸ್ಕೃತಗೊಂಡ ಬಗ್ಗೆ ವರದಿಯಾಗಿರುವುದಿಲ್ಲ.

ಊ) ಗುಲ್ಬರ್ಗಾ ಹಾಗೂ ಚಿತ್ತಾಪೂರ ತಾಲ್ಲೂಕುಗಳಲ್ಲಿ ಯೋಜನೆ ಪ್ರಾರಂಭವಾದಾಗಿನಿಂದ 2003ರ ಮುಂಗಾರು ಹಂಗಾಮಿನವರೆವಿಗೂ

ರೂ.520.19 ಲಕ್ಷಗಳು ಬೆಳೆ ವಿಮಾ ಯೋಜನೆಯಲ್ಲಿ ವಿತರಿಸಲಾಗಿದೆ. ತಾಲ್ಲೂಕುವಾರು ಮತ್ತು ವರ್ಷವಾರು ಮಾಹಿತಿಯನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

2085 (3011) : ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿರುವ ಭಾಗ್ಯಜ್ಯೋತಿ ಹಾಗೂ ಕುಟೀರ ಜ್ಯೋತಿ ಯೋಜನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಹಾಗೂ ಸಾಗರ ತಾಲ್ಲೂಕಿನ ಫಲಾನುಭವಿಗಳವಾರು ವಿವರ ಒದಗಿಸಿ) ;

ಆ) ಈ ಭಾಗ್ಯಜ್ಯೋತಿ, ಹಾಗೂ ಕುಟೀರಜ್ಯೋತಿ ಹಾಗೂ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆಯೇ ಹಾಗೂ ಇದಕ್ಕೆ ಕಾರಣಗಳೇನು ;

ಇ) ಆರ್.ಇ.ಸಿ. ಯೋಜನೆಯಡಿ ವಿದ್ಯುದೀಕರಣ ಯೋಜನೆಯನ್ನು ಪೂರ್ಣಗೊಳಿಸದಿರಲು ಕಾರಣಗಳೇನು ;

ಈ) ಇದಕ್ಕೇನಾದರೂ ಅರಣ್ಯ ಇಲಾಖೆಯ (ವಿದ್ಯುತ್ ಲೈನು ಎಳೆಯಲು) ಅಡಚಣೆ ಇದೆಯೇ ;

ಉ) ಇದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮವೇನು; (ವಿವರ ನೀಡುವುದು);

ಊ) ಆರ್.ಇ.ಸಿ. ಯೋಜನೆಯಡಿ ಬಾಕಿ ಇರುವ ಗ್ರಾಮಗಳೆಷ್ಟು ;

ಋ) ಯಾವಾಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)–

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿರುವ ಭಾಗ್ಯಜ್ಯೋತಿ ಹಾಗೂ ಕುಟೀರಜ್ಯೋತಿ ಸ್ಥಾವರಗಳ ತಾಲ್ಲೂಕುವಾರು ವಿವರಗಳು ಕೆಳಕಂಡಂತೆ ಇದೆ.